# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1337 (1547)

ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 17.03.2026

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಪ್ರಮುಖ ತೋಟಗಾರಿಕಾ ಬೆಳೆ ಬೆಳೆಯುವ ಕರಾವಳಿ ಭಾಗಗಳಲ್ಲಿ ಅಡಿಕೆ ಬೆಳೆಗಾರರು ಹವಾಮಾನ ವ್ಯತ್ಯಾಸ, ಅಕಾಲಿಕ ಮಳೆ, ತಾಪಮಾನ ಏರಿಕೆ ಮತ್ತು ಕೀಟ / ರೋಗ ಬಾಧೆಯಿಂದ ಸಂಕಷ್ಟಕ್ಕೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಗಮನಕ್ಕೆ ಬಂದಿರುತ್ತದೆ.</td></tr>
<tr><td>ಆ)</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಕೆಲ ಭಾಗಗಳಲ್ಲಿ ಎಳೆ ಅಡಿಕೆ (ನಳ್ಳಿ) ಉದುರುವ ಸಮಸ್ಯೆ ಉಂಟಾಗಿದ್ದು, ಅಂದಾಜು ಎಷ್ಟು ಪ್ರಮಾಣದ ಬೆಳೆ ನಷ್ಟವಾಗಿದೆ; ಎಷ್ಟು ಪ್ರಮಾಣದ ಪರಿಹಾರ ಮೊತ್ತವನ್ನು ವಿತರಿಸಲಾಗಿದೆ;</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಕೆಲ ಭಾಗಗಳಲ್ಲಿ 8 ರಿಂದ 10 % ರಷ್ಟು ಎಳೆ ಅಡಿಕೆ (ನಳ್ಳಿ) ಉದುರಿರುವುದಾಗಿ ಅಂದಾಜಿಸಲಾಗಿದೆ.<br>ಬೆಳೆ ನಷ್ಟವಾದಲ್ಲಿ ಪರಿಹಾರ ನೀಡುವ ಕಾರ್ಯಕ್ರಮ ತೋಟಗಾರಿಕೆ ಇಲಾಖೆಯಲ್ಲಿ ಇರುವುದಿಲ್ಲ. ಆದರೆ, ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆವಿಮೆ ಯೋಜನೆಯಡಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಸೇರಿದಂತೆ ಅಡಿಕೆ ಬೆಳೆಯು ಅಧಿಸೂಚಿತವಾಗಿದ್ದು, ಹವಾಮಾನ ವೈಪರೀತ್ಯದಿಂದ ಬೆಳೆ ನಷ್ಟ ಸಂಭವಿಸಿದಲ್ಲಿ ವಿಮಾ ಪರಿಹಾರವನ್ನು ಒದಗಿಸಲಾಗುತ್ತಿದೆ.
<table>
<tr><th>ಕ್ರ. ಸಂ.</th><th>2024-2025 ನೇ ಸಾಲಿನ ಬೆಳೆ ವಿಮೆ ವಿವರ</th><th>ಅಡಿಕೆ ಬೆಳೆಯುವ ಜಿಲ್ಲೆಗಳಿಗೆ</th></tr>
<tr><td>1.</td><td>ಅರ್ಜಿಗಳ ಸ್ವೀಕೃತ (ಸಂಖ್ಯೆ)</td><td>5,28,705</td></tr>
<tr><td>2.</td><td>ವಿಸ್ತೀರ್ಣ (Covered) ಹೆಕ್ಟೇರ್ ಗಳಲ್ಲಿ</td><td>1,73,060.42</td></tr>
<tr><td>3.</td><td>ವಿಮಾ ಮೊತ್ತ (Sum insured) (Amount in Crores)</td><td>2,215.17</td></tr>
<tr><td>4.</td><td>ಪಾವತಿಸಲಾದ ವಿಮಾ ಮೊತ್ತ (Claim amount in Crores)</td><td>622.49</td></tr>
</table></td></tr>
</table>

<table>
<tr><td></td><td></td><td><table><tr><td>5.</td><td>ಫಲಾನುಭವಿಗಳ ಸಂಖ್ಯೆ</td><td>5,02,109</td></tr><tr><td>6.</td><td>2025-2026 ನೇ ಸಾಲಿನ ಬೆಳೆ ವಿಮೆ ಅರ್ಜಿಗಳ ಸ್ವೀಕೃತ (ಸಂಖ್ಯೆ)</td><td>6,52,440</td></tr></table></td></tr>
<tr><td>ಇ)</td><td>ತಾಪಮಾನ ಹೆಚ್ಚಾದಾಗ ಹಾಗೂ ಅಕಾಲಿಕ ಮಳೆಯ ಪರಿಣಾಮವಾಗಿ ಹಿಂಗಾರು ಸಾಯುವುದು, ಕರಟುವುದು ಮತ್ತು ಎಲೆಚುಕ್ಕೆ ರೋಗ ಹೆಚ್ಚಾಗುತ್ತಿರುವ ಬಗ್ಗೆ ಸರ್ಕಾರ ಯಾವುದಾದರೂ ಸಮೀಕ್ಷೆ ನಡೆಸಿದೆಯೇ; ಅದರ ವಿವರಗಳೇನು;</td><td>ರಾಜ್ಯದಲ್ಲಿ ತೋಟಗಾರಿಕೆ ಇಲಾಖೆವತಿಯಿಂದ ಎಲೆ ಚುಕ್ಕೆ ರೋಗದಿಂದ 88559 ಹೆಕ್ಟೇರ್ ಅಡಿಕೆ ಬೆಳೆ ಪ್ರದೇಶ ಹಾನಿಗೊಳಗಾಗಿರುವುದಾಗಿ ಅಂದಾಜಿಸಲಾಗಿದೆ. ಅಡಿಕೆ ಎಲೆ ಚುಕ್ಕೆ ರೋಗದಿಂದ ಹಾನಿಗೊಳಗಾದ ವಿವರ ಕೆಳಗಿನಂತಿದೆ:
<table>
<tr><th>ಕ್ರ. ಸಂ.</th><th>ಜಿಲ್ಲೆಯ ಹೆಸರು</th><th>ಹಾನಿಗೊಳಗಾದ ಎಲೆಚುಕ್ಕೆ ರೋಗ ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)</th></tr>
<tr><td>1.</td><td>ಚಿಕ್ಕಮಗಳೂರು</td><td>25210</td></tr>
<tr><td>2.</td><td>ಶಿವಮೊಗ್ಗ</td><td>32124</td></tr>
<tr><td>3.</td><td>ಉತ್ತರ ಕನ್ನಡ</td><td>8730</td></tr>
<tr><td>4.</td><td>ಹಾಸನ</td><td>360</td></tr>
<tr><td>5.</td><td>ದಕ್ಷಿಣ ಕನ್ನಡ</td><td>20830</td></tr>
<tr><td>6.</td><td>ಉಡುಪಿ</td><td>455</td></tr>
<tr><td>7.</td><td>ಕೊಡಗು</td><td>850</td></tr>
<tr><td colspan="2">ಒಟ್ಟು</td><td>88559</td></tr>
</table></td></tr>
<tr><td>ಈ)</td><td>ಎಲೆ ಚುಕ್ಕೆ ರೋಗ ನಿಯಂತ್ರಣಕ್ಕೆ ಶಿಫಾರಸ್ಸು ಮಾಡಲಾಗುತ್ತಿರುವ ಪ್ರೋಪಿಕೊನಜೋಲ್ ಸೇರಿದಂತೆ ರಾಸಾಯನಿಕ ಸಿಂಪಡನೆಗಳು ಜೇನು ಕೃಷಿಗೆ ಹಾನಿಕಾರಕವಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಜೇನು ಸಾಕಾಣಿಕೆಕಾರರಿಗೆ ನಷ್ಟವಾಗದಂತೆ ಪರ್ಯಾಯ ಜೀವಾಣುನಾಶಕ/ ಜೈವಿಕ ವಿಧಾನಗಳನ್ನು ಪರ್ಯಾಲೋಚಿಸುವ ಮತ್ತು ಶಿಫಾರಸ್ಸು ಮಾಡುವ ಯೋಜನೆ ಇದೆಯೇ;</td><td>ಸಾಮಾನ್ಯವಾಗಿ ಯಾವುದೇ ರಾಸಾಯನಿಕ ಔಷದಿ ಸಿಂಪಡಣೆಯಿಂದ ಜೇನುಕೃಷಿಗೆ ಹಾನಿ ಉಂಟು ಮಾಡುವ ಸಾಧ್ಯತೆ ಇರುತ್ತದೆ.<br><br>ಪರ್ಯಾಯ ವಿಧಾನಗಳನ್ನಾಗಿ ಜೀವಾಣುನಾಶಕ/ ಜೈವಿಕ ವಿಧಾನಗಳನ್ನು ಪರ್ಯಾಲೋಚಿಸುವ ಮತ್ತು ಶಿಫಾರಸ್ಸು ಮಾಡುವ ಉದ್ದೇಶ ಇರುತ್ತದೆ.</td></tr>
<tr><td>ಉ)</td><td>ಹವಾಮಾನ ಬದಲಾವಣೆಯಿಂದ ಉಂಟಾಗುತ್ತಿರುವ ಬೆಳೆ ನಷ್ಟದ ಹಿನ್ನೆಲೆಯಲ್ಲಿ ಅಡಿಕೆ ಇತರ ತೋಟಗಾರಿಕಾ ಬೆಳೆಗಾರರಿಗೆ</td><td>ಹವಾಮಾನ ಬದಲಾವಣೆಯಿಂದ ಉಂಟಾಗುತ್ತಿರುವ ಬೆಳೆ ನಷ್ಟದ ಹಿನ್ನೆಲೆಯಲ್ಲಿ ಅಡಿಕೆ ಮತ್ತು ಇತರೆ ತೋಟಗಾರಿಕೆ ಬೆಳೆಗಳಿಗೆ ನೆರವು ನೀಡಲು ಕೆಳಕಾಣಿಸಿದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:-</td></tr>
</table>

| | ಪ್ರಶ್ನೆ | ಉತ್ತರ |
|---|---|---|
| | ವಿಶೇಷ ಪರಿಹಾರ ಪ್ಯಾಕೇಜ್, ಬೆಳೆ ವಿಮೆ, ಇನ್ ಪುಟ್ ಸಬ್ಸಿಡಿ ಅಥವಾ ತುರ್ತು ನೆರವು ನೀಡುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; | (ಕೆಳಗೆ ನೋಡಿ) |

1. ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆವಿಮೆ ಯೋಜನೆಯಡಿ ಅಡಿಕೆ ಬೆಳೆಯು ಅಧಿಸೂಚಿತವಾಗಿದ್ದು, ಹವಾಮಾನ ವೈಪರೀತ್ಯದಿಂದ ಬೆಳೆ ನಷ್ಟ ಸಂಭವಿಸಿದಲ್ಲಿ ವಿಮಾ ಪರಿಹಾರವನ್ನು ಒದಗಿಸಲಾಗುತ್ತಿದೆ. ವಿವರ ಕೆಳಗಿನಂತಿದೆ:-

| **ಕ್ರ. ಸಂ.** | **2024-2025 ನೇ ಸಾಲಿನ ಬೆಳೆ ವಿಮೆ ವಿವರ** | **ಅಡಿಕೆ ಬೆಳೆಯುವ ಜಿಲ್ಲೆಗಳಿಗೆ** |
|---|---|---|
| 1. | ಸ್ವೀಕೃತ ಅರ್ಜಿಗಳ ಸಂಖ್ಯೆ | 5,28,705 |
| 2. | ವಿಸ್ತೀರ್ಣ (Covered) ಹೆಕ್ಟೇರ್ ಗಳಲ್ಲಿ | 1,73,060.42 |
| 3. | ವಿಮಾ ಮೊತ್ತ (Sum insured) (Amount in Crores) | 2,215.17 |
| 4. | ಪಾವತಿಸಲಾದ ವಿಮಾ ಮೊತ್ತ (Claim amount in Crores) | 622.49 |
| 5. | ಫಲಾನುಭವಿಗಳ ಸಂಖ್ಯೆ | 5,02,109 |
| 6. | 2025-2026 ನೇ ಸಾಲಿನ ಬೆಳೆ ವಿಮೆ ಅರ್ಜಿಗಳ ಸ್ವೀಕೃತ (ಸಂಖ್ಯೆ) | 6,52,440 |

2. ಹಾನಿಯಾದ ತೋಟಗಾರಿಕೆ ಬೆಳೆಗಳಿಗೆ NDRF/SDRF ಮಾರ್ಗಸೂಚಿಯನ್ವಯ ಪ್ರತಿ ಹೆಕ್ಟೇರ್ ಮಳೆಯಾಶ್ರಿತ ಬೆಳೆಗಳಿಗೆ ರೂ.8,500/-, ನೀರಾವರಿ ಬೆಳೆಗಳಿಗೆ ರೂ.17,000/- ಮತ್ತು ಬಹುವಾರ್ಷಿಕ ಬೆಳೆಗಳಿಗೆ ರೂ.22,500/- ಗಳನ್ನು ಪ್ರತಿ ರೈತರಿಗೆ 2 ಹೆಕ್ಟೇರ್ ವರೆಗೆ ಕಂದಾಯ ಇಲಾಖೆಯ ವಿಪತ್ತು ನಿರ್ವಹಣಾ ಕೋಶದ ಮುಖಾಂತರ ವಿತರಿಸಲಾಗುತ್ತದೆ.

3. 2025-26 ನೇ ಸಾಲಿನಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಶನ್ ಯೋಜನೆಯ "Special Interventions" - ಅಡಿಕೆ ಬೆಳೆಯಲ್ಲಿ ಎಲೆಚುಕ್ಕೆ ರೋಗದ ನಿಯಂತ್ರಣ ಕಾರ್ಯಕ್ರಮದಡಿ ಸಮಗ್ರ ರೋಗ/ಕೀಟಗಳ ಹಾಗೂ ಪೋಷಕಾಂಶಗಳ ನಿರ್ವಹಣೆಗಾಗಿ ಪ್ರತಿ ಹೆಕ್ಟೇರಿಗೆ ತಗಲುವ ರೂ.5,000/- ಗಳಲ್ಲಿ ಶೇ.30 ರಂತೆ ಪ್ರತಿ ಹೆಕ್ಟೇರಿಗೆ ರೂ.1,500/- ದರದಲ್ಲಿ 2 ಹೆಕ್ಟೇರ್ ರವರೆಗೆ ರೂ.3,000/- ಗಳ ಸಹಾಯಧನ ನೀಡಲಾಗುತ್ತಿದೆ. ಈ ಬಾಬ್ತು ರೂ.8.61 ಕೋಟಿಗಳ ಅನುದಾನ ಬಿಡುಗಡೆಯಾಗಿದ್ದು, ಈವರೆಗೂ 16,866 ರೈತರಿಗೆ 33,450 ಹೆಕ್ಟೇರ್ ಪ್ರದೇಶಕ್ಕೆ ರೂ.5.53 ಕೋಟಿಗಳ ಸಹಾಯಧನ ನೀಡಲಾಗಿರುತ್ತದೆ. ಕಾರ್ಯಕ್ರಮ ಪ್ರಗತಿಯಲ್ಲಿರುತ್ತದೆ.

4. ಪ್ರಸಕ್ತ ಸಾಲಿನಲ್ಲಿ ಅಡಿಕೆ ಬೆಳೆಗೆ ಬಾಧಿಸುವ ಎಲೆಚುಕ್ಕೆ ರೋಗ, ಹಳದಿ ಎಲೆ ರೋಗ ಹಾಗೂ ಕೊಳೆ ರೋಗಗಳ ನಿರ್ವಹಣೆಗಾಗಿ CPCRI (Central Plantation Crops

| | | |
|---|---|---|
| | | Research Institute), ಕಾಸರಗೋಡು ಸಂಸ್ಥೆಯ ಪ್ಯಾಕೇಜ್ ಶಿಫಾರಸ್ಸು ಮಾಡಿದ್ದು, ಈ ಅನ್ವಯ ಫೈಟೋಸಾನಿಟರಿ (Phytosanitory) ಕ್ರಮಗಳ ಅಳವಡಿಕೆ (ರೋಗ ಬಾಧಿತ ಸಸ್ಯದ ಭಾಗಗಳನ್ನು ತೆಗೆಯುವುದು ಮತ್ತು ನಾಶಪಡಿಸುವುದು), ಸಸ್ಯ ಸಂರಕ್ಷಣಾ ಕ್ರಮಗಳು ಹಾಗೂ ಪೋಷಕಾಂಶಗಳ ಸಮಗ್ರ ನಿರ್ವಹಣೆಗೆ ಒಟ್ಟಾರೆ ರೂ.577.76 ಕೋಟಿಗಳ ಪ್ರಸ್ತಾವನೆಯನ್ನು ಸಿದ್ಧಪಡಿಸಲಾಗಿದೆ. ಇದರಲ್ಲಿ NHM-MIDH ಮಾರ್ಗಸೂಚಿಯನ್ವಯ ಶೇ.30 ರಷ್ಟು ಸಹಾಯಧನದಂತೆ ಒಟ್ಟು ರೂ.173.32 ಕೋಟಿಗಳನ್ನು (ಕೇಂದ್ರ ಪಾಲು ರೂ.103.99 ಕೋಟಿಗಳು (60%) ಹಾಗೂ ರಾಜ್ಯ ಪಾಲು ರೂ.69.33 ಕೋಟಿಗಳು (40%)) ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. |
| ಊ) | ಅಡಿಕೆ ಬೆಳೆಗಾರರಿಗೆ ತಾಂತ್ರಿಕ ಮಾರ್ಗದರ್ಶನ, ನಿಯಮಿತ ತೋಟ ಪರಿಶೀಲನೆ ಮತ್ತು ಹವಾಮಾನ ಆಧಾರಿತ ಎಚ್ಚರಿಕಾ ವ್ಯವಸ್ಥೆ (Weather Advisory System) ಜಾರಿಗೆ ತರುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಕೈಗೊಂಡ ಕ್ರಮಗಳು ಕೆಳಗಿನಂತಿವೆ:-<br>1. ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಅಡಿಕೆ ತೋಟಗಳಿಗೆ ಭೇಟಿ ನೀಡಿ ತಾಂತ್ರಿಕ ಮಾರ್ಗದರ್ಶನ ನೀಡುತ್ತಾರೆ.<br>2. ಇಲಾಖೆ ವತಿಯಿಂದ ವಿವಿದ ಯೋಜನೆಗಳಡಿ ನೀಡಲಾಗುವ ಸಹಾಯಧನ/ಸೌಲಭ್ಯಗಳ ಬಗ್ಗೆ ತೋಟ ಪರಿಶೀಲನೆ ನಡೆಸಿ ಕ್ರಮಕೈಗೊಳ್ಳಲಾಗುತ್ತಿದೆ.<br>3. ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿಗ್ಯಾಲಯ, ಶಿವಮೊಗ್ಗ ರವರ ತಜ್ಞರ ಸಹಯೋಗದೊಂದಿಗೆ ಅಡಿಕೆ ತೋಟಗಳ ಸಮಗ್ರ ಪೋಷಕಾಂಶ ಹಾಗೂ ರೋಗ/ಕೀಟಗಳ ನಿರ್ವಹಣೆ ಕುರಿತು ಕೈಪಿಡಿ, ಕರಪತ್ರಗಳು ಮತ್ತಿತರೆ ಸಮೂಹ ಮಾಧ್ಯಮಗಳು ಹಾಗೂ ತರಬೇತಿ ಮತ್ತು ಕಾರ್ಯಾಗಾರಗಳ ಮೂಲಕ ರೈತರಿಗೆ ಅರಿವು ಮೂಡಿಸಲಾಗುತ್ತಿದೆ.<br>4. ಹವಾಮಾನ ಆಧಾರಿತ ಎಚ್ಚರಿಕಾ ವ್ಯವಸ್ಥೆ (Weather Advisory System) ಜಾರಿಯಲ್ಲಿರುತ್ತದೆ. |

ಸಂಖ್ಯೆ: HORTI 120 HGM 2026

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು